

# ಮಾಲಿಂಗನ ಬಳ್ಳಿ ಕಂಡಿರಾ?

– ಡಾ. ಸತ್ಯ

ಹೊಲಗಳ ಬದಿಯ ಬೇಲಿಯಲ್ಲಿ, ಕುರುಚಲು ಕಾಡಿನ ಕಳ್ಳಿಮೆಳೆಗಳ ಮೇಲೆ ಹರಡಿದ ಹಾಗಲ ಬಳ್ಳಿಯಂತಹ ದೊಡ್ಡ ಬಳ್ಳಿ ಇದು. ಅದರ ಕಾಯಿ ನೀಲಬಣ್ಣದ ಬೀಜದ್ರಾಕ್ಷಿಯ ಗಾತ್ರ ಮೀರದು. ಇದರ ಉಪಯೋಗ ಅರಿತರೆ ಇನ್ನೊಮ್ಮೆ ಬೇಲಿಗೆ ಕುಡುಗೋಲು ಆಡಿಸುವಾಗ ರೈತರು ಯೋಚನೆ ಮಾಡಿಯಾರು. ಈ ಬಹೂಪಕಾರಿ ಬಳ್ಳಿಯನ್ನು ಬದುಕಲು ಬಿಡಿ.

ಕಛೇರಿಯ ಮಧ್ಯಾಹ್ನದ ವೇಳೆಯಲ್ಲಿ ಇಬ್ಬರು ಭಾರಿ ದೇಹದ ಆಗಂತುಕರು ಬಂದು ಪರಿಚಯಿಸಿಕೊಂಡರು. ತಾವು ನೆರೆಯ ತಮಿಳು ನಾಡಿನ ಹೊಸೂರು ಸನಿಹದ ಶೂಲಗಿರಿ ಓಂಶಕ್ತಿ ದೇಗುಲದಲ್ಲಿ ಇತ್ತೀಚೆಗೆ ಒಬ್ಬರೊಡನೆ ಮಾತನಾಡುತ್ತಲಿದ್ದೆವು; ಆಗ ಅವರು ಒಂದು ಬಳ್ಳಿಯ ಕುರಿತು ವಿವರಿಸಿದರು. ದೇಗುಲದ ಪರಿಸರದಲ್ಲಿ ಭೂಮಿ ಶುದ್ಧಿಗೆ ಒಂದು ಬಳ್ಳಿ ನೆಡಬೇಕಂತೆ. ಅದರ ಹೆಸರು ಮಾಲಿಂಗನ ಬಳ್ಳಿಯಂತೆ. ಬೆಂಗಳೂರಲ್ಲಿ ಯಾರನ್ನೂ ಬಿಡಲಿಲ್ಲ. ಎಲ್ಲಾ ಕಡೆಗೆ ವಿಚಾರಿಸಿದ್ದಾಯಿತು. ಎಲ್ಲರೂ ಅಮೃತ ಬಳ್ಳಿ ತೋರಿಸಿದರು. ಮಾಲಿಂಗನ ಬಳ್ಳಿಯ ಹೆಸರೇ ಕೇಳಿದವರಿಲ್ಲ ಎಂದು ಕತೆ ಹೇಳಿದರು. ನಾನು ತಕ್ಷಣ ಬಲ್ಲೆ ಎಂದುತ್ತರಿಸಿದೆ. ಅವರಿಗೆ ನಿಟ್ಟುಸಿರ ಸಮಾಧಾನ. ಗಿಡದ ಚಹರೆ ಹುಡುಕಾಡಿ ಗುರುತು ಹಾಕಿ ಕೊಟ್ಟೆ. ಹಿಂದಿನ ದಿನ ತಾನೆ ಬೆಂಗಳೂರು ಹೊರವಲಯದ ಹೆಸರಘಟ್ಟ ತೋಟಗಾರಿಕೆ ಸಂಸ್ಥೆಗೆ ಹೋಗಿದ್ದೆ. ಕಾರಿನ ಕಿಟಕಿಯಿಂದ ಆಗಾಗ

ಮಾಲಿಂಗನ ಬಳ್ಳಿಯ ನೆತ್ತರು ರಂಗಿನ  ಹಣ್ಣು ಕಣ್ಣಿಗೆ ರಾಚಿದ್ದು ನೆನಪಿತ್ತು. ಹಾದಿ ಹೇಳ ಬಂದ ಆಗಂತುಕರನ್ನು ಸಾಗ ಹಾಕಿದೆ. ಕೇವಲ ಎರಡು ತಾಸಿನಲ್ಲಿ ಅವರು ಮರಳ ಹಾಜರ್. ಕೈಯಲ್ಲಿ  ಹರಳಿನ ರೆಂಬೆ ಮತ್ತು ಎಮ್ಮೆ ಮುಳ್ಳಿನ ತುದಿ ಹಿಡಿದು ಮರಳಿದ ಅವರನ್ನು ಕಂಡು ಅಯ್ಯೋ ಎನಿಸಿತು. ಇದು ವರೆಗೆ ಮರ ಗಿಡ ಬಳ್ಳಿ ಕಂಡೆ ಇರದ ಅವರು ಆ ನಡು ಬಿಸಿಲಲ್ಲಿ ಧೂಳು ಹಾದಿಯಲ್ಲಿ ತಿರುಗಿದ್ದು ದಂಡ ಎನಿಸಿತು. ಮರುದಿನ ಬೆಳಗ್ಗೆ ಬಂದು ಕಾಣಲು ತಿಳಿಸಿದೆ. ಮರುದಿನ ಮುಂಜಾನೆ ಹಾಜರ್. ಬೆಂಗಳೂರು ಹೊರವಲಯದ ಹೆಸರಘಟ್ಟ ಹಾದಿಯಲ್ಲಿ ಲಕ್ಷ್ಮಿಪುರದ ವರೆಗೆ ಸಾಗಿದ್ದೆವು. ಕಳತ್ತೂರು ಗಾರ್ಡನ್ಸ್ ಎಂಬ ಫಲಕ ಕಾಣಸಿತು. ಗಾಡಿ ನಿಲ್ಲಿ ಸಲು ಹೇಳಿದೆ. ಅರಸುತ್ತಿದ್ದ ಬಳ್ಳಿ ಕಂಡಿತು.



ಮೊದಲು ಕಂಡದ್ದು ಕತ್ತಾಳೆ ಗಿಡದ ಎಲೆಯಲಗಿಗೆ ಸುತ್ತಿ ಹಬ್ಬಿದ್ದ ಕಳಿತ ಕೆಂಪು ಹಣ್ಣಿನ ತೋರಣ. ಎಲೆ ಎಲ್ಲ ಒಣಗಿದ ಬಳ್ಳಿ ಗಿಣ್ಣು ತುಂಬ ಗುಂಡನೆ ತಿಳಿ ಹಸಿರುಕಾಯಿಗಳ ಗೊಂಚಲು. ಕಳಿತಾಗ ಅದು ನೆತ್ತರುಕೆಂಪು ಬಣ್ಣ. ಹಣ್ಣಿನ ಮೇಲೆ ಅಲ್ಲಲ್ಲಿ ಬಿಳಿಯ ನಾಮದ ಗೀರಿನ ರಚನೆಗಳು. ಒಂದೆರಡು ಬಲಿತ ಹಣ್ಣು ಒಣಗಿ ಬಿರಿದು ಸಿಪ್ಪೆ ಸುರುಳಿಗೊಂಢಿತ್ತು. ಒಳಗೆ ಕರಿ ಬೀಜ. ಸುರುಳಿ ಬಿಡಿಸಿ ತೋರಿಸಿದೆ. ದ್ರಾಕ್ಷಿ ಬೀಜದ ಗಾತ್ರ. ಆದರೆ ಒಂದು ವಿಚಿತ್ರ. ಒಂದೊಂದು ಬೀಜವೂ ಶಿವನ ಲಿಂಗದೋಪಾದಿ. ಕೆಳಗೆ ಪಾಣಿ ಪೀಠ. ಒಂದು ಬದಿಗೆ ಗೋಮುಖ. ಮೇಲೆ ಲಿಂಗದ ರಚನೆ. ಮಾಂಸಲ ಹಣ್ಣಿನೊಳಗೆ ಬೆಣ್ಣೆಯಂತಹ  ಗೊಣ್ಣೆ. ಅದರೊಳಗೆ ಈ ಕರಿಬೀಜ ಹುದುಗಿದೆ. ಒಂದು ಹಣ್ಣೊಳಗೆ ನಾಕಾರು ಬೀಜವಿದೆ. ಪ್ರತಿ ಮಳೆಗಾಲದಲ್ಲಿ ಬಳ್ಳಿ ಚಿಗುರಲು ಮಣ್ಣಡಿಯ ಗೆಡ್ಡೆ ಕಾರಣ. ವಿಚಿತ್ರ ಆಕಾರದ ಬೀಜದ ದೆಸೆಯಿಂದ ಮಾಲಿಂಗನ ಬಳ್ಳಿ, ಶಿವಲಿಂಗಿ ಬಳ್ಳಿ ಎಂಬ ಹೆಸರು. ಲ್ಯಾಟಿನ್ ಹೆಸರು ಡಿಪ್ಲೊಸೈಕ್ಲೊಸ್ ಪಾಮೇಟಸ್. ಕುಲ ಕುಕುರ್ಬಿಟೇಸಿ.

ಕಚೇರಿಯ ಲೆಕ್ಕಾಧಿಕಾರಿ ಗುಲ್ಬರ್ಗದ ಸಾಲಿಮಠ್ ಹೇಳಿದರು. "ನಮ್ಕಡಿ ಭಾಳ ಬೆಳೀತದೆ ಸರ್ ಈ ಬಳ್ಳಿ, ಅದ್ರೆ ಬಳಕೆ ಗೊತ್ತಿಲ್ಲ." ಕಾಮತ್ ಹೊಟೆಲ್ ಸರಣಿಯ ಮಾಲಕ ಭಟ್ಕಳದ ದೇವಕಿ ಕೃಷ್ಣ ಕಾಮತರು ಹೇಳಿದ ಮಾಹಿತಿ ಇನ್ನೂ ಸ್ವಾರಸ್ಯದ್ದು. "ಸೂಪಾ,ಕಾಳಿ ಕಡೆ ಬೆಳೆವ ಈ ಬಳ್ಳಿಗೆ ಕೊಂಕಣಿ ಭಾಷೆ ಹೆಸರು ಕಾರಟ್. ಕಾಯಕಲ್ಪಕ್ಕೆ ಹಿಂದೆ ಮಂದಿ ಭಾಳ ಬಳಸ್ತಾ ಇದ್ರು. ಕಾಡಿಗ್ಗರುಗ ಎಲೆ ರಸ ಸಂಗಡ ಬೆರಸಿ ಬಳ್ಳಿ ರಸ

ಸೇವಿಸ್ತಾ ಇದ್ರು. ದೇಹದ ಬಲ, ವೀರ್ಯ ಹೆಚ್ಚು ಮಾಡುತ್ತದೆ. ಅಷ್ಟೇ ಅಲ್ಲ. ದೀವಳಿಗೆ ಹಬ್ಬಕ್ಕೆ ನೀರ ಹಂಡೆಗೆ ಹಿಂಡಲಚ್ಚಿ ಬಳ್ಳಿ ಸಿಗದಿದ್ರೆ ಈ ಬಳ್ಳಿ ಸುತ್ತೊ ಪದ್ಧತಿ ಇದೆ" ಎಂದು ಮೌಖಿಕ ಪರಂಪರೆಯ  ಹಲವು ಮಾಹಿತಿ ಸುರುಳಿ ಬಿಚ್ಚಿಟ್ಟರು. ಬಹುತೇಕ ಅದೇ ತೆರನಾದ ಮಾಹಿತಿ ಶಿವಮೊಗ್ಗೆ ಜಿಲ್ಲೆಯ ಸಾಗರ, ಹೊಸನಗರ ಆಸು ಪಾಸಿನಲ್ಲಿ ಸಹ ದೊರಕಿದೆ.

ಬಳ್ಳಿ ಹುಡುಕುವ ಮೂಲ ಕಾಯಕಕ್ಕೆ ನನ್ನನ್ನು ತೊಡಗಿಸಿದಾತನ ಸಂಗಡಿಗ ವಾಸ್ತು ಪ್ರವೀಣ ಪುರುಷೋತ್ತಮ ಹೇಳಿದ ಸಂಗತಿ ಅಚ್ಚರಿ ಮಾಹಿತಿಗೆ ತಾಳೆ ಹೋಗುತ್ತಿತ್ತು. ಮೈ ದುರ್ವಾಸನೆ, ಚರ್ಮ ಕಾಯಿಲೆ  ಪರಿಹಾರಕ್ಕೆ ಮಾಲಿಂಗನ ಬಳ್ಳಿ ಎಲೆ ಅರೆದು ಲೇಪನ ಹಿತವಂತೆ. ವಾಸ್ತು ಪ್ರಕಾರ ದೇಗುಲ, ಮನೆ ನಿರ್ಮಾಣದ ಜಾಗದಲ್ಲಿ ಈ ಬಳ್ಳಿ ನೆಟ್ಟರೆ  ಸ್ಥಳ ಶುದ್ಧಿ ಎಂಬುದು ಇಲ್ಲಿ ಉಲ್ಲೇಖನೀಯ ಸಂಗತಿ. ದೇಃ ಮತ್ತು ದೇಶ ಅಥವಾ ನಿರ್ಮಾಣ ಮಾಡುವ ಸ್ಥಳದ ಪರಿಕಲ್ಪನೆ  ಸಮಾನ. ದೇಹದ ಶುದ್ಧೀಕರಣಕ್ಕೆ ಬಳಕೆ ಆಗುವ ಬಳ್ಳಿ ಮತ್ತೆ ದೇಶ ಶುದ್ಧಿಗೆ ಬಳಸಿದರೆ ತಪ್ಪಿಲ್ಲ. ಒಟ್ಟಿನಲ್ಲಿ ಈ ನೆಪದಲ್ಲಿ ಇಂತಿಹ ಬಳ್ಳಿಯೊಂದು ಜನಸಮುದಾಯಕ್ಕೆ ಪರಿಚಯವಾಗುತ್ತದೆ ಎಂದು ನೆಮ್ಮದಿ ಎನಿಸಿತು. ಬೀಜ ಪುಡಿಮಾಡಿ ಗಂಡು ಅಥವಾ ಹೆಣ್ಣಿನ ಸಂತಾನ ಹೀನತೆಗೆ ಕೊಡುವ ಬರಿಗಾಲ ವೈದ್ಯರ ಮಾಹಿತಿ ನನಗೆ ತಿಳಿದಿತ್ತು. ರಸವಿದ್ಯೆಯಲ್ಲಿ ಸಹ ಬೀಜ ಬಳಕೆಯ ಮಾಹಿತಿ ಇದೆ. ಆದರೆ ಎಳೆ ಬಳ್ಳಿಯನ್ನು ಕತ್ತರಿಸಿ ಗೊಜ್ಜು, ಪಲ್ಯ, ಸೊಪ್ಪು ಸಾರಿಗೆ ಬಳಸುವ ಅಚ್ಚರಿ ಉಲ್ಲೇಖ ತುಂಬ ಸಂಯಸದ ಸಂಗತಿ. ಕುತೂಹಲ, ಆಶಯ, ಅಚ್ಚರಿ, ಉಪಕಾರಗಳನ್ನು ಮೈದುಂಬಿಕೊಂಡಿರುವ ಈ ಸಸ್ಯ ವೈವಿಧ್ಯ ಮತ್ತು ಅದರ ಸಮಸ್ತ ಮಾಹಿತಿ ಮೂಲ ಮುಂದಿನ ಪೀಳಿಗೆಗೆ ಉಳಿಸೋಣವೆ?

***